ಶ್ರೀ ಅರಗ ಜ್ಞಾನೇಂದ್ರ:- ಮಾನ್ಯ ಉಪಾಧ್ಯಕ್ಷರೆ, ತನಿಖೆಯಾದ ರಿಪೋರ್ಟ್ ತಮ್ಮ ಎದುರಿಗೆ ಇದೆ.

ಉಪಾಧ್ಯಕ್ಷರು:- ಅದನ್ನು ಅವರ ಕಡೆಗೆ ಕಳುಹಿಸಿಕೊಡಿ.

ಶ್ರೀ ಆಯನೂರು ಮಂಜುನಾಥ್:- ಇಲ್ಲಿ ಹೇಗೆಬೇಕೋ ಹಾಗೆ ಉತ್ತರವನ್ನು ಕೊಟ್ಟರೆ ಇನ್ನೇನು ತನಿಖೆ ಮಾಡಿಸುತ್ತೀರಿ?

ಉಪಾಧ್ಯಕ್ಷರು:- ಜೀರೋ ಅವರ್‌ನಲ್ಲಿ ಉತ್ತರ ಕೊಡುವುದಿಲ್ಲ. ತಾವು ಕೂತುಕೊಳ್ಳಿ. ನಿರ್ದಿಷ್ಟವಾಗಿ ಹೇಳಿ.

ಒಬ್ಬ ಮಾನ್ಯ ಸದಸ್ಯರು:- ತಪ್ಪು ಮಾಡಿದವರ ವಿರುದ್ಧ ಕ್ರಿಮಿನಲ್ ಕೇಸ್ ಹಾಕಿ ಅರೆಸ್ಟ್ ಮಾಡಬೇಕು.

ಶ್ರೀ ಆಯನೂರು ಮಂಜುನಾಥ್:- ಅಲ್ಲಿ ಮಕ್ಕಳು ಸತ್ತಿದ್ದರೆ ಎಷ್ಟು ಗಂಭೀರವಾದ ಪರಿಣಾಮ ವಾಗುತ್ತಿತ್ತು ಎಂಬುದನ್ನು ಯೋಚನೆ ಮಾಡಿದ್ದೀರಾ?

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವೆಯವರು ಒಂದು ವಾರ-ದೊಳಗೆ ಸಂಬಂಧಪಟ್ಟ ಅಕ್ರಮದ ಬಗ್ಗೆ ತನಿಖೆಯನ್ನು ನಡೆಸುವುದು ಮಾತ್ರವಲ್ಲ, ಕ್ರಮವನ್ನೂ ಕೂಡ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ನಾವೂ ಕೂಡ ಹೇಳುತ್ತೇವೆ. ಇಂಥ ಪ್ರಕರಣಗಳು ಅನೇಕ ಕಡೆ ನಡೆದಿವೆ. ನಮ್ಮ ಗಮನಕ್ಕೂ ಕೂಡ ಬಂದಿದೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳುವ ಭರವಸೆಯನ್ನು ಅತ್ಯಂತ ಪ್ರಾಮಾಣಿಕವಾಗಿ ತೆಗೆದುಕೊಳ್ಳುತ್ತೇನೆಂದು ಅವರು ಹೇಳಿದ್ದಾರೆ.

ವಿಷಯ:- (ಎ) ತೋಟಗಾರಿಕೆ ಇಲಾಖೆಯವರು ರೈತರಿಗೆ ಸಬ್ಸಿಡಿ ರೂಪದಲ್ಲಿ ಮೈಲು ತುತ್ತವನ್ನು ವಿತರಣೆ ಮಾಡುವ ತೂಕದಲ್ಲಿ ಅವ್ಯವಹಾರ.

+ ಶ್ರೀ ಡಿ.ವಿ. ಸದಾನಂದ ಗೌಡ:- ಮಾನ್ಯ ಉಪಾಧ್ಯಕ್ಷರೆ, ಇದುವರೆಗೆ ಅರಗ ಜ್ಞಾನೇಂದ್ರ ರವರು, ಆಯನೂರು ಮಂಜುನಾಥ್‌ರವರು ಪ್ರಸ್ತಾಪ ಮಾಡಿದ್ದಾರೆ ಇದಕ್ಕಿಂತಲೂ ಬಹಳ ಗಂಭೀರ-ವಾದ ಅವ್ಯವಹಾರ ತೋಟಗಾರಿಕೆ ಇಲಾಖೆಯಲ್ಲಿ ನಡೆಯುತ್ತಿದೆ. ರಾಜ್ಯ ಸರ್ಕಾರಕ್ಕೆ ಮತ್ತು ರಾಜ್ಯದ ರೈತರಿಗೆ ಮೋಸಮಾಡುವಂಥ ಒಂದು ದೊಡ್ಡ ಜಾಲವೊಂದು ತೋಟಗಾರಿಕಾ ಇಲಾಖೆಯಲ್ಲಿ ನಡೆಯುತ್ತಿದೆ. ರೈತರಿಗೆ ಸಬ್ಸಿಡಿ ರೂಪದಲ್ಲಿ ಮೈಲು ತುತ್ತವನ್ನು ನೀವು ವಿತರಣೆ ಮಾಡುತ್ತೀರಿ ಇದರಲ್ಲಿ ತೂಕದಲ್ಲಿ ಮೋಸಮಾಡುವಂಥ ಗಂಭೀರ ಕೆಲಸ ನಡೆಯುತ್ತಿದೆ. ಯಾರೋ ಕೆಲವು ಗುತ್ತಿಗೆದಾರರ ಕೈಯಿಂದ ಸರಬರಾಜುದಾರರು, ಇವರ ಜೊತೆಯಲ್ಲಿ ಜಿಲ್ಲಾ ಪಂಚಾಯಿತಿನವರೆಲ್ಲರೂ ಶಾಮೀಲಾಗಿ ತೂಕದಲ್ಲಿ ತುಂಬಾ ವ್ಯತ್ಯಾಸ ಮಾಡುತ್ತಿದ್ದಾರೆ. ತಮಗೆ ಉದಾಹರಣೆಗೆ ಹೇಳುವುದಾದರೆ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ಅಪ್ಪು ಬ್ಯಾಂಡ್ ಎನ್ನುವವರು ಇದನ್ನು ಸರಬರಾಜು ಮಾಡುತ್ತಾರೆ. ಒಂದು ಗೋಣಿ ಚೀಲದಲ್ಲಿ 5 ಕೆ.ಜಿ. ಇರುವಂಥ 10 ಪ್ಯಾಕೆಟ್‌ಗಳು ಇರುತ್ತವೆ. ಪ್ರತಿಯೊಂದು 5 ಕೆ.ಜಿ.ಯ ಪ್ಯಾಕೆಟ್‌ನಲ್ಲೂ ಸುಮಾರು 300-400 ಗ್ರ್ಯಾಂನಷ್ಟು ಕಾಪರ್ ಸಲ್ಫೇಟ್ ಇರುವುದಿಲ್ಲ. ಅಂದರೆ 50

ಕೆ.ಜಿ. ಚೀಲದಲ್ಲಿ ಸುಮಾರು ಒಂದೂವರೆ ಕೆ.ಜಿ.ಯಿಂದ ಎರಡು ಕೆ.ಜಿ.ಯಷ್ಟು ಕಾಪರ್ ಸಲ್ಫೇಟ್ ಇರುವುದಿಲ್ಲ. ಇದನ್ನೆಲ್ಲಾ ಒಂದುಸಾರಿ ತೂಕಮಾಡಿ ನೋಡಲಾಗಿದೆ. ನಮ್ಮ ದಕ್ಷಿಣ ಕನ್ನಡಕ್ಕೆ ಪ್ರಥಮ ಕಂತಿನಲ್ಲಿ ಎಷ್ಟು ಕಾಪರ್ ಸಲ್ಫೇಟನ್ನು ಸರಬರಾಜು ಮಾಡಿದ್ದಾರೆ ಗೊತ್ತೆ? 28,850 ಕೆ.ಜಿ. ಸರಬರಾಜು ಮಾಡಿದ್ದಾರೆ. ಇದರಲ್ಲಿ ಸುಮಾರು 800 ರಿಂದ 1000 ಕೆ.ಜಿ.ಯಷ್ಟು ಕಾಪರ್ ಸಲ್ಫೇಟ್ ಇಲ್ಲ. 1 ಕೆ.ಜಿ. ಕಾಪರ್ ಸಲ್ಫೇಟಿಗೆ 65 ರೂ; ಪ್ರಥಮ ಕಂತಾಗಿ ತೋಟಗಾರಿಕೆ ಇಲಾಖೆಯವರು ಬಿಡುಗಡೆ ಮಾಡಿದಂಥ 28,850 ಕೆ.ಜಿ.ಯಲ್ಲಿ ಸುಮಾರು 65 ಸಾವಿರ ರೂ.ಗಳಷ್ಟು ಕೊಳ್ಳಿ ಹೊಡೆದಿದ್ದಾರೆ, ಇದಕ್ಕೆ ಕಾರಣ ಇದೆ. ಕಳೆದ ವರ್ಷ ಜಿಲ್ಲಾ ಪಂಚಾಯಿತಿಯಿಂದ ತೋಟಗಾರಿಕೆ ಇಲಾಖೆಗೆ ವಿತರಣೆ ಮಾಡುವಾಗ ಕ್ಯಾಂಪ್ಕೋದಿಂದ ಖರೀದಿ ಮಾಡುತ್ತಿದ್ದರು. ಆದರೆ ಆಗ ಈ ರೀತಿ ತೂಕದಲ್ಲಿ ವ್ಯತ್ಯಾಸ ಆಗುತ್ತಿರಲಿಲ್ಲ. ಕ್ವಾಲಿಟಿಯಲ್ಲಿ ವ್ಯತ್ಯಾಸ ಆಗುತ್ತಿರಲಿಲ್ಲ, ಎಲ್ಲವೂ ಸಮರ್ಪಕವಾಗಿರುತ್ತಿತ್ತು. ಈಗ ಇದರಲ್ಲಿ ಕೊಳ್ಳಿ ಹೊಡೆಯಬೇಕೆಂಬ ದುರುದ್ದೇಶದಿಂದ ಅಧಿಕಾರಿಗಳು, ಇವರ ಜೊತೆಗೆ ಜಿಲ್ಲಾ ಪಂಚಾಯಿತಿಯವರೂ ಕೂಡ ಶಾಮೀಲಾಗಿದ್ದಾರೆಂದು ತಿಳಿದುಬರುತ್ತಿದೆ. ಇವರೆಲ್ಲರೂ ಸೇರಿ ಈ ದೊಡ್ಡ ಕರ್ಮಕಾಂಡವನ್ನು ಮಾಡುತ್ತಿದ್ದಾರೆ. ಇವತ್ತು ರೈತರಿಗೆ ಬಹಳಷ್ಟು ಅನ್ಯಾಯವಾಗಿದೆ. ನಾನಾದರೂ ಕೇಳುವುದಿಷ್ಟೆ, ಇದರ ಬಗ್ಗೆ ಸಮಗ್ರವಾಗಿ ತನಿಖೆ ಮಾಡಿಸಬೇಕು. ತೋಟಗಾರಿಕೆ ಇಲಾಖೆಯ ಮೂಲಕ ರೈತರಿಗೆ ಬಹಳಷ್ಟು ಸಾಮಗ್ರಿಗಳನ್ನು ಸಬ್ಸಿಡಿ ರೂಪದಲ್ಲಿ ಕೊಡುವಂಥಾದ್ದು ಇದೆ, ಈ ರೀತಿಯ ತಪ್ಪು ಮಾಡಿದವರ ವಿರುದ್ಧ ತೀವ್ರ ಕ್ರಮ ತೆಗೆದುಕೊಳ್ಳಬೇಕು. ಇನ್ನು ಮುಂದೆ ಸರ್ಕಾರದವರು ಇಂಥ ಸರಬರಾಜುದಾರರನ್ನು ಬ್ಲ್ಯಾಕ್ ಲಿಸ್ಟ್‌ನಲ್ಲಿ ಇಡಬೇಕು. ಇದರ ಜೊತೆಗೆ ಸಹಕಾರಿ ಸಂಘದಿಂದ ಉತ್ತಮ ಕ್ವಾಲಿಟಿಯ (ಕಾಪರ್ ಸಲ್ಫೇಟ್ ಇತ್ಯಾದಿ) ವಸ್ತುಗಳನ್ನು ಖರೀದಿ ಮಾಡಿ ರೈತರಿಗೆ ಹಂಚುವುದರ ಮೂಲಕ ವ್ಯವಸ್ಥೆ ಮಾಡಿದರೆ ಇಂಥ ಅವ್ಯವಹಾರಗಳನ್ನು ತಡೆಯುವುದಕ್ಕೆ ಅವಕಾಶವಾಗುತ್ತದೆ. ತಕ್ಷಣವೇ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು):- ಮಾನ್ಯ ಉಪಾಧ್ಯಕ್ಷರೆ, ರೈತರಿಗೆ ಈ ರೀತಿಯ ಮೋಸವಾಗುತ್ತಿದ್ದರೂ ಸರ್ಕಾರ ಕಣ್ಣುಮುಚ್ಚಿಕೊಂಡು ಕೂತುಕೊಳ್ಳುವುದಕ್ಕೆ ಖಂಡಿತ ಸಾಧ್ಯವಿಲ್ಲ. ಅದು ಕಾಪರ್ ಸಲ್ಫೇಟ್ ಇರಬಹುದು, ಅಥವಾ ಬೇರೆ ಯಾವುದೇ ಸಾಮಗ್ರಿಯಲ್ಲಿ ಇರಬಹುದು ರೈತರಿಗೆ ಅನ್ಯಾಯ ಮಾಡುತ್ತಿದ್ದಾರೆಂದು ಹೇಳುವಂಥ ಮಾತನ್ನು ಕೇಳಿದರೇ ನನಗೆ ರಕ್ತ ಕುದಿಯುತ್ತದೆ. ಇದನ್ನು ನೋಡಿಕೊಂಡು ನಾವು ಕೂರುವುದಿಲ್ಲ. ಅಂಥ ತಪ್ಪಿತಸ್ಥರ ವಿರುದ್ಧ ಖಂಡಿತವಾಗಿ ಉಗ್ರ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಸಹಕಾರ ಸಂಘಗಳಿಂದ ಇಂಥ ಸಾಮಗ್ರಿಗಳನ್ನು ಖರೀದಿಸಬೇಕೆಂದು ತಾವು ಸಲಹೆ ಮಾಡಿದ್ದೀರಿ; ಅದನ್ನೂ ಕೂಡ ನಾವು ಪರಿಶೀಲಿಸುತ್ತೇವೆ. ಇದರ ಜೊತೆಗೆ ಕರ್ನಾಟಕ ಕೃಷಿ ಕೈಗಾರಿಕಾ ನಿಗಮ ಎಂಬ ನಮ್ಮದೇ ಆದ ಒಂದು ಸಂಸ್ಥೆ ಇದೆ. ಇದರ ಮೂಲಕ ಕೂಡ ರೈತರಿಗೆ ಬೇಕಾದಂಥ ಪರಿಕರಗಳನ್ನು ಸರಬರಾಜು ಮಾಡುವಂಥ ವ್ಯವಸ್ಥೆಯನ್ನು ಮಾಡುತ್ತೇವೆ.